# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 57 (4) |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ .ಎಸ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| ಉತ್ತರಿಸುವ ದಿನಾಂಕ | : | 13.02.2024 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ ಒಂದು ವರ್ಷದಿಂದ ರಾಜ್ಯದಲ್ಲಿ ಆಗಿರುವ ಹೂಡಿಕೆ ಒಪ್ಪಂದಗಳು ಎಷ್ಟು; ಈ ಪೈಕಿ ಹೂಡಿಕೆಗೆ ಸರ್ಕಾರದ ಅನುಮತಿ ನೀಡಿರುವ ಮತ್ತು ಈಗಾಗಲೇ ಕಾರ್ಯಾರಂಭ ಮಾಡಿರುವ ಕೈಗಾರಿಕೆಗಳು ಯಾವುವು; (ಸಂಪೂರ್ಣ ವಿವರ ನೀಡುವುದು) | ಕಳೆದ ಒಂದು ವರ್ಷದಿಂದ ರಾಜ್ಯದಲ್ಲಿ ಒಟ್ಟು 12 ಬಂಡವಾಳ ಹೂಡಿಕೆ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ.<br><br>ಈ ಒಪ್ಪಂದಗಳಲ್ಲಿ ಈಗಾಗಲೇ 2 ಯೋಜನೆಗಳಿಗೆ ರಾಜ್ಯ ಉನ್ನತ ಮಟ್ಟದ ಸಮಿತಿ (SHLCC) ಯಿಂದ ಅನುಮೋದನೆಯನ್ನು ನೀಡಲಾಗಿದ್ದು, ಈ ಯೋಜನೆಗಳು ಕಾರ್ಯರಂಭ ಮಾಡುವ ವಿವಿಧ ಹಂತಗಳಲ್ಲಿವೆ. |
| ಆ | ಈ ಒಪ್ಪಂದಗಳಿಂದಾಗಿ ಸೃಷ್ಟಿಯಾಗಿರುವ ಮತ್ತು ಸೃಷ್ಟಿಯಾಗಲಿರುವ ಉದ್ಯೋಗಾವಕಾಶಗಳು ಎಷ್ಟು; (ಕೈಗಾರಿಕೆವಾರು ವಿವರ ನೀಡುವುದು) | ಈ ಒಪ್ಪಂದಗಳಿಂದ ಒಟ್ಟು ರೂ. 71,496 ಕೋಟಿ ಬಂಡವಾಳ ಹೂಡಿಕೆಯಾಗಲಿದೆ ಮತ್ತು 70,950 ಉದ್ಯೋಗವಕಾಶಗಳು ಸೃಷ್ಟಿಯಾಗಲಿವೆ.<br><br>ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಿದೆ. |
| ಇ | ಬೆಂಗಳೂರು ಹೊರತುಪಡಿಸಿ ರಾಜ್ಯದ ಇತರೆ ಜಿಲ್ಲೆಗಳಲ್ಲಿ ಹೂಡಿಕೆಗೆ ಹೆಚ್ಚು ಅವಕಾಶ ಕಲ್ಪಿಸಲು ಹಾಗೂ ರಾಜ್ಯಕ್ಕೆ ಬಂಡವಾಳ ಆಕರ್ಷಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ➢ 2023-24ನೇ ಸಾಲಿನಲ್ಲಿ ಜನವರಿ ಅಂತ್ಯಕ್ಕೆ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿಯಲ್ಲಿ 241 ಬಂಡವಾಳ ಹೂಡಿಕೆ ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಇವುಗಳಿಂದ ಸುಮಾರು ರೂ. 50,025 ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು, 58,051 ಜನರಿಗೆ ಉದ್ಯೋಗವಕಾಶ ಲಭ್ಯವಾಗಲಿದೆ.<br><br>➢ ಈ 241 ಯೋಜನೆಗಳಲ್ಲಿ 24 ಯೋಜನೆಗಳು ಬೆಂಗಳೂರು ಜಿಲ್ಲೆಯಲ್ಲಿದ್ದು, ಅವುಗಳ ಬಂಡವಾಳ ಹೂಡಿಕೆ ರೂ.21,537 ಕೋಟಿಯೊಂದಿಗೆ 19,243 ಜನರಿಗೆ ಉದ್ಯೋಗವಕಾಶ ಲಭ್ಯವಾಗಲಿದೆ, ಇನ್ನುಳಿದ 217 ಯೋಜನೆಗಳು ರಾಜ್ಯದ ಇನ್ನಿತರ ಜಿಲ್ಲೆಗಳಿಗೆ ಸಂಬಂಧಿಸಿದ್ದು ,ಅವುಗಳ ಬಂಡವಾಳ ಹೂಡಿಕೆ ರೂ.28,488 ಕೋಟಿಯೊಂದಿಗೆ 38,808 ಜನರಿಗೆ ಉದ್ಯೋಗವಕಾಶ ಲಭ್ಯವಾಗಲಿದೆ. |

| | | |
|---|---|---|
| | | ➢ ಅಲ್ಲದೇ, ಪ್ರಸ್ತುತ ರಾಜ್ಯದ ವಿವಿಧ ಭಾಗಗಳಲ್ಲಿ ಉದ್ದಿಮೆ ಸ್ಥಾಪನೆ, ಉದ್ಯೋಗ ಸೃಷ್ಟಿಗೆ ರಾಜ್ಯ ಸರ್ಕಾರವು ಬಿಯಾಂಡ್ ಬೆಂಗಳೂರು ಕಲ್ಪನೆಯಡಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕೈಗಾರಿಕೆಗಳ ಸ್ಥಾಪನೆಗಾಗಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.<br>➢ ರಾಜ್ಯದ ಇತರ ಜಿಲ್ಲೆಗಳಲ್ಲಿ ಹೂಡಿಕೆ ಮಾಡುವ ಕಂಪನಿಗಳಿಗೆ ಕೈಗಾರಿಕಾ ನೀತಿ 2020-25ರಲ್ಲಿ ವಿವಿಧ ರೀತಿಯ ಪ್ರೋತ್ಸಾಹಧನ ಹಾಗೂ ವಿನಾಯಿತಿಗಳನ್ನು ನೀಡಲಾಗುತ್ತದೆ.<br>➢ ರಾಜ್ಯಕ್ಕೆ ನಿರ್ದಿಷ್ಟ ವಲಯದಲ್ಲಿ ಹೆಚ್ಚಿನ ಹೂಡಿಕೆಯನ್ನು ಆಕರ್ಷಿಸಲು ಮತ್ತು ಸಮಾನ ಮತ್ತು ಸುಸ್ಥಿರ ಬೆಳವಣಿಗೆಯ ಮೂಲಕ ಏಷ್ಯಾದಲ್ಲಿ ಭವಿಷ್ಯದ ತಂತ್ರಜ್ಞಾನ ಉತ್ಪಾದನೆಗೆ ರಾಜ್ಯವನ್ನು ನೆಚ್ಚಿನ ತಾಣವನ್ನಾಗಿಸಲು ಮತ್ತು ಕರ್ನಾಟಕದ ಸ್ಥಾನವನ್ನು ಉತ್ಕೃಷ್ಟಗೊಳಿಸಲು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿ ಏರೋಸ್ಪೇಸ್ & ಡಿಫೆನ್ಸ್, ಮೆಷಿನ್ ಟೂಲ್ಸ್, ಎಲೆಕ್ಟ್ರಾನಿಕ್ಸ್ ಸಿಸ್ಟಮ್ ಡಿಸೈನ್ & ಮ್ಯಾನುಫ್ಯಾಕ್ಚರಿಂಗ್ (ESDM), ಫಾರ್ಮಾಸ್ಯುಟಿಕಲ್ಸ್, ಕೋರ್ ಮ್ಯಾನುಫ್ಯಾಕ್ಚರಿಂಗ್, ಆಟೋಮೋಟಿವ್ / ಎಲೆಕ್ಟ್ರಿಕ್ ವೆಹಿಕಲ್ಸ್, ಇಂಡಸ್ಟ್ರಿ 5.0, ಟೆಕ್ಸ್ ಟೈಲ್ಸ್ ಮತ್ತು ಗ್ರೀನ್ ಎನರ್ಜಿ ವಲಯಗಳ 9 ವಲಯವಾರು ವಿಷನ್ ಗ್ರೂಪ್‌ಗಳನ್ನು ರಚಿಸಲಾಗಿದೆ. ಈ ವಿಷನ್ ಗ್ರೂಪ್‌ಗಳಲ್ಲಿರುವ ವಿವಿಧ ಕ್ಷೇತ್ರಗಳ ತಜ್ಞರೊಂದಿಗೆ ಚರ್ಚಿಸಿ, ಕೈಗಾರಿಕಾ ಅಭಿವೃದ್ಧಿಗಾಗಿ ವಿವಿಧ ಕ್ರಮಗಳನ್ನು ವಹಿಸಲಾಗುತ್ತದೆ.<br>➢ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಅಧ್ಯಕ್ಷತೆಯಲ್ಲಿ Invest Karnataka Forum ನ್ನು ಪುನರ್ರಚಿಸಲಾಗಿದ್ದು, Strategic Investments Committee ಯನ್ನೂ ಸಹ ರಚಿಸಲಾಗಿದೆ. ಈ Committee ಯಲ್ಲಿ ವಿವಿಧ ಕ್ಷೇತ್ರಗಳ ಪರಿಣಿತರಿದ್ದು, ಅವರೊಂದಿಗೆ ಚರ್ಚಿಸಿ, ರಾಜ್ಯದಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆಗೆ ಅಗತ್ಯ ಕ್ರಮ ವಹಿಸಲಾಗುತ್ತಿದೆ. |

**ಸಿಐ53 ಎಸ್.ಪಿ.ಐ 2024**

**(ಎಂ.ಬಿ. ಪಾಟೀಲ)**
**ಬೃಹತ್ ಮತ್ತು ಮಧ್ಯಮ ಕೈಗಾರಿಕಾ**
**ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು**

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೇಶವಪ್ರಸಾದ್. ಎಸ್ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 57 (4) ರ ಅನುಬಂಧ

| MEMORANDUM OF UNDERSTANDING (MoU)- SIGNED DURING 2023-24 | | | | | | | | |
|---|---|---|---|---|---|---|---|---|
| Sl. No. | Date of Signing | Company Name | Activity | Land Requirement | Investment (Rs. in Crore) | Employment | Proposed Years of Investment | Status of Approval |
| 1 | 11/21/2023 | Toyota Kirloskar Motor Pvt Ltd | Manufacturing of Cars/SUVs | Existing Land | 3,300 | 2,000 | 2023-27 | Approved 62nd SHLCC meeting |
| 2 | 3/3/2023 | Hon Hai Technology Group (Foxconn) | Manufacturing & Assembling of Smart Phones | Manufacturing facility over a 300 acre land parcel | 21,911 | 50,000 | 2023-27 | Approved 61st SHLCC meeting |
| 3 | 7/31/2023 | Foxconn Industrial Internet (FII - Foxconn) | Mechanical enclosures and Casing | Manufacturing facility over a 100 acre land parcel | 3,000 | 12,000 | 2023-27 | Yet to Apply |
| 4 | 7/31/2023 | Foxsemicon Intefration Technology Inc. (FITI - Foxconn) | Semiconductor equipment Manufcturing | Manufacturing facility in35 acre land parcel | 2,000 | 1,000 | 2023-27 | Yet to Apply |
| 5 | 7/31/2023 | International Battery Company India Pvt Ltd | Manufacturing of Lithium - Ion NMC Prismatic Cells | Manufacturing facility over a 100 acre land parcel | 8,000 | 2,000 | 5 years starting 2023-24 | Applied for SHLCC Clearance |
| 6 | 1/16/2024 | Ampergia Americas | Manufacture of Solar Panels, Inverters and EV Charging Plants | | 100 | 100 | 5 years starting August 2024 | Yet to Apply |
| 7 | 1/16/2024 | Faction AI | Manufacture of 'Smart City' Infrastructure | | 2,000 | 100 | 5 years starting 2023-24 | Yet to Apply |
| 8 | 1/16/2024 | Insta Synergies Pvt Ltd | Providing Services for Employee Welfare Programmes | | 10 | 50 | 5 years starting 2023-24 | Yet to Apply |
| 9 | 1/17/2024 | NTT Limited | Data Centre | 8.6 acre of land | 10,135 | 100 | 5 years starting 2024-25 | Yet to Apply |
| 10 | 1/16/2024 | Pangaea Data | Construction of Biopharmaceuticals and Cancer Diagnosis and Treatment hospitals | | 40 | 100 | 5 years starting 2023-24 | Yet to Apply |
| 11 | 1/16/2024 | Web Werks India Pvt Ltd | Data Centre Park and Associated Infrastructure | | 20,000 | 1,000 | Construction of Data Centre in 2025 | Yet to Apply |
| 12 | 1/31/2024 | ICT Service Management Solutions (India) Pvt Ltd | Manufacture of laptops and repair centre for global brands | Manufacturing facility in 32 acre land parcel | 1,000 | 2,500 | 5 years starting 2024-25 | Applied for SHLCC Clearance |
| | | | | | **71,496** | **70,950** | | |